ಬೊಗಳುತ್ತಿಲ್ಲ... ಓ ದೇವರೇ ಏನಾಗಿದೆ ನನಗೆ... ಇದು ಕನಸೋ ನಿಜವೋ, ನಾನು ಸತ್ತಿರುವುದು ಕನಸಲ್ಲೋ ನಿಜವಾಗಲೋ?...

ಅದೋ ಅಲ್ಲಿ... ದೂರದಲ್ಲಿ, ರಸ್ತೆಯ ತುದಿಯಲ್ಲಿ ಬೀದಿ ದೀಪದ ಹಾಲೋಜಿನ್ ಬೆಳಕಿನ ಕೆಳಗೆ ಯಾರೋ ನಿಂತಿದ್ದಾರಲ್ಲ... ಹೌದು ಅವನೇ... ನನಗೆ ಸ್ಪಷ್ಟವಾಗಿ ಕಾಣುತ್ತಿದೆ. ಅವನೇ ಅದು, ಎದೆ ಝಲ್ ಎಂದಿದೆ! ಈ ನನ್ನ ಕೂಗು ಅವನಿಗೆ ಕೇಳಿತೆಂದರೆ ಇದು ಕನಸೋ ನಿಜವೊ ಎಂಬುದಕ್ಕೆ ಉತ್ತರ ಸಿಕ್ಕಿದಂತೆ... ಬದುಕಿದ್ದೇನೆಯೋ ಸತ್ತಿದ್ದೇನೆಯೋ ಉತ್ತರ ಸಿಕ್ಕಂತೆ...

ಗಂಟಲು ಹರಿಯುವಂತೆ ಚೀರುತ್ತ ನಾನು ಅವನತ್ತ ಓಡುತ್ತಿದ್ದೇನೆ... 'ಮೋsss...'

**(ಬೆಂಗಳೂರಿನ 'ಸುಚಿತ್ರಾ ಸಿನೆಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ' ತನ್ನ 'ಕಥಾಕಮ್ಮಟ'ದ ಭಾಗವಾಗಿ ನಡೆಸಿದ ಕಥಾಸ್ಪರ್ಧೆಯಲ್ಲಿ ಎರಡನೆ ಬಹುಮಾನ ಪಡೆದ ಕತೆ)**


**ಕರ್ಕಿ ಕೃಷ್ಣಮೂರ್ತಿ**

ವೃತ್ತಿಯಲ್ಲಿ ಸಿವಿಲ್ ಎಂಜಿನಿಯರ್. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಕರ್ಕಿ ಅವರ ಊರು. ಪ್ರಸ್ತುತ ಬೆಂಗಳೂರಿನಲ್ಲಿ ವಾಸವಾಗಿರುವ ಅವರು ಬಹುರಾಷ್ಟ್ರೀಯ ಕಂಪೆನಿಯೊಂದರಲ್ಲಿ ಸೀನಿಯರ್ ಜನರಲ್ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದಾರೆ. 'ಮಳೆಮಾರುವ ಹುಡುಗ' ಎನ್ನುವ ಕಥಾಸಂಗ್ರಹ ಪ್ರಕಟವಾಗಿದೆ. ಹಲವಾರು ಲೇಖನಗಳು, ಕತೆಗಳು ಕನ್ನಡದ ಹಲವು ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.